ಒಂದು ಕಡೆ ಮಳೆ ಬಂದಾಗ ಪ್ರವಾಹ ಬರುತ್ತದೆ. ಮತ್ತೊಂದು ಕಡೆ ಬರಗಾಲ ಬಂದಿದೆ. ಸಮಗ್ರವಾದ ನೀರಾವರಿಗೆ ಸಂಬಂಧಪಟ್ಟ ಹಾಗೆ ಪರಮಶಿವಯ್ಯನವರ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಮತ್ತು ನೇತ್ರಾವತಿ ನದಿಯನ್ನು ಈ ಕಡೆ ಭಾಗಕ್ಕೆ ತರಬೇಕು. ಇದುವರೆಗೂ ಡಾ: ನಂಜುಂಡಪ್ಪ ವರದಿ ಆಗಲೀ ನಮ್ಮ ಬೆಂಗಳೂರು, ಕೋಲಾರ, ಚಿತ್ರದುರ್ಗ, ತುಮಕೂರು, ಬಹುಶಃ ಕೇಳದೆ ಇರುವಂಥ ಜಿಲ್ಲೆಯಾಗಿದೆ. ದಯಮಾಡಿ ಇದರ ಬಗ್ಗೆ ಈ ಸದನದಲ್ಲಿ ತೀರ್ಮಾನ ತೆಗೆದುಕೊಳ್ಳಿ ಸಮುದ್ರಕ್ಕೆ ಪೋಲಾಗುತ್ತಿರುವಂಥ ನೀರನ್ನು ಹೇಗೆ ಇದನ್ನು ಉಪಯೋಗಿಸಿಕೊಂಡು ಈ ಜಿಲ್ಲೆಗಳಿಗೆ ಬೇಕಾಗಿರುವಂಥ ಕುಡಿಯುವ ನೀರಿನ ಕೊರತೆಯನ್ನು ಮತ್ತು ರೈತರಿಗೆ ಬೇಕಾಗಿರುವಂಥ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವೆನ್ನುವುದರ ಬಗ್ಗೆ ಚಿಂತನೆಯನ್ನು ಮಾಡಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಮ್ಮೆ ನಾನು ನಿಮಗೆಲ್ಲರಿಗೂ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ಚರ್ಚೆಯಲ್ಲಿ ಮುಕ್ತಾಯ ಮಾಡಲಾಗಿದೆ. ಈಗ ಒಂದು ಪ್ರಕಟಣೆ ಇದೆ.

10 ಪ್ರಕಟಣೆ

ಅಧ್ಯಕ್ಷರು ; ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಒಂದು ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2005ನೇ ಸಾಲಿನ ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ವಿಧೇಯಕವನ್ನು ಈ ದಿನ ದಿನಾಂಕ:29ನೇ ಸೆಪ್ಟೆಂಬರ್ 2006 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅನುಮೋದಿಸಿದೆ ಎಂದು ತಿಳಿಸಿರುತ್ತಾರೆ.

11 ಶಾಸನ ರಚನೆ

ಆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2005.

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗು ಘನತೆವೆತ್ತ ರಾಜ್ಯಪಾಲರ ಪರವಾಗಿ ಸಂದೇಶದೊಡನೆ ಪುನರ್ ಪರಿಗಣನೆಗಾಗಿ

ಹಿಂತಿರುಗಿಸಲಾದಂತೆ ಮತ್ತು ವಿಧಾನಪರಿಷತ್ತಿನಿಂದ ಎರಡನೇ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಪಟ್ಟಣ್ಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿಶೇಷವಾದಂತಹದು ಯಾವುದೂ ಇಲ್ಲ. ಕಳೆದ ವರ್ಷ ಈ Country and Town Planning Act ನಲ್ಲಿ

ಅಧ್ಯಕ್ಷರು : ಬಿಲ್ಲಿನ ಮಂಡನೆಯಾಗಿದೆ, explainಮಾಡಿ

ಶ್ರೀ ಎನ್. ಧರಂಸಿಂಗ್ : ಈ ಸಭೆಯಲ್ಲಿ ಏನು ನಡೆಯುತ್ತಿದೆ, ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. clarifications ಕೇಳಿ ಆದಮೇಲು ಇವರು ಹೇಗೆ ಮಾತನಾಡುತ್ತಾರೆ?

ಡಾ : ವಿ.ಎಸ್. ಆಚಾರ್ಯ : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

12. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಬರ ಹಾಗೂ ಡಾ: ನಂಜುಡಪ್ಪ ವರದಿ ಬಗ್ಗೆ ನಡೆದ ಚರ್ಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ (ಮುಂದುವರಿದುದು)

ಅಧ್ಯಕ್ಷರು : ಮುಖ್ಯಮಂತ್ರಿಗಳು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ಏನು ಸದನದ ಎಲ್ಲಾ ಸದಸ್ಯರುಗಳು ಪುನಃ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಉತ್ತರವನ್ನು ಕೊಡಬೇಕಾದರೆ ಕೆಲವು ವಿಷಯಗಳನ್ನು ವಿವರವಾಗಿ ಹೇಳಲಿಲ್ಲ. ಕಾರಣ ಸನ್ಮಾನ್ಯ ವಿರೋಧಪಕ್ಷದ ನಾಯಕರು ಇವತ್ತು ಆದಷ್ಟು ಬೇಗನೆ ಕಲಾಪವನ್ನು ಮುಗಿಸಿ, ಇದನ್ನು ಎಳೆಯುವುದು ಬೇಡವೆಂಬ ಮಾತನ್ನು ಹೇಳಿದ್ದರು. ಇವತ್ತು ಖರ್ಗೆಯವರು ಮತ್ತು ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದ್ದಾರೆ. ಬೆಂಗಳೂರಿನಲ್ಲಿ ಒಂದು ಸಭೆಯನ್ನು ಕರೆದು ನಂಜುಂಡಪ್ಪ ವರದಿಯಿರಬಹುದು, ಮತ್ತೆ ಈ ಭಾಗದ ಬರಗಾಲದ ವಿಷಯಗಳಲ್ಲಿ ಸರ್ವಪಕ್ಷ ಸಭೆಯನ್ನು ಕರೆದು ಎಲ್ಲರೊಂದಿಗೆ ಒಂದು ಚರ್ಚೆಯನ್ನು ಮಾಡಬೇಕೆಂದು ಏನು ಹೇಳಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡಿದ್ದೇನೆ, ಸಧ್ಯದಲ್ಲೇ ಬೆಂಗಳೂರಿನಲ್ಲಿ ಒಂದು ಸಭೆಯನ್ನು